ಮೀನುಗಾರರ ಜೀವದ ರಕ್ಷಣೆಯ ದೃಷ್ಟಿಯಿಂದ ತಾತ್ಕಾಲಿಕ ಪರಿಹಾರವಾಗಿ ಶೀಘ್ರದೇ ಹೊಳೆತ್ತುವ ಸಲುವಾಗಿ ಬಂದರು ಇಲಾಖೆಯವರು ರೂ 265 00 ಲಕ್ಷಗಳ ರೇಖಾ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿದ್ದು, 'ಅಸೈಡ್ ಯೋಜನೆಯಡಿ' ಧನ ಸಹಾಯ ಪಡೆಯಲು ಪ್ರಯತ್ನಿಸಲಾಗುತ್ತಿದೆ

ತೆಂಗಿನಗುಂಡಿ

ಅಳವೆ ಕೋಡಿಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ ಮೀನುಗಾರಿಕೆ ಇಳಿದಾಣ ಕೇಂದ್ರ ನಿರ್ಮಾಣ ಮಾಡಲು ಭಾರತ ಸರ್ಕಾರದ ಅನುಮೋದನೆಗಾಗಿ 2002–03 ಸಾಲಿನ ಎಸ್ ಆರ್ ದರದ ಪ್ರಕಾರ ರೂ 225 00 ಲಕ್ಷಗಳ ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿದೆ ಈ ಯೋಜನೆಯಲ್ಲಿ ಹೂಳೆತ್ತುವ ಕಾಮಗಾರಿ ಹಾಗೂ ಇತರೇ ಅಭಿವೃದ್ಧಿ ಕಾಮಗಾರಿಗಳು ಸೇರಿರುತ್ತವೆ ಕೇಂದ್ರ ಸರ್ಕಾರವು ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಲು ಕೋರಿರುತ್ತದೆ ಪರಿಷ್ಕೃತ ಪ್ರಸ್ತಾವನೆ ಸಿದ್ದಪಡಿಸಿ, ಸಲ್ಲಿಸಿ ಭಾರತ ಸರ್ಕಾರದ ಅನುಮೋದನೆ ದೊರೆತ ನಂತರ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು

ಹೊನ್ನಾವರ

ಹೊನ್ನಾವರ 2ನೇ ಹಂತದ ಮೀನುಗಾರಿಕೆ ಬಂದರು ನಿರ್ಮಿಸುವ ಸಂಬಂಧ ಕೇಂದ್ರ ಸರ್ಕಾರವು ರಚಿಸಿದ್ದ ಅಧ್ಯಯನ ತಂಡವು ಸ್ಥಳ ಪರಿಶೀಲನೆ ಮಾಡಿ ವರದಿ ನೀಡಿರುತ್ತದೆ ವರದಿಯ ಆಧಾರದ ಮೇಲೆ ಸಮಗ್ರ ಪ್ರಸ್ತಾವನೆ ಸಿದ್ದಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಇದರಲ್ಲಿ ಹೂಳೆತ್ತುವ ಕಾಮಗಾರಿಯು ಸೇರಿರುತ್ತದೆ

ಮೀನುಗಾರರ ಜೀವದ ರಕ್ಷಣೆಯ ದೃಷ್ಟಿಯಿಂದ ತಾತ್ಕಾಲಿಕ ಪರಿಹಾರವಾಗಿ ಹೂಳೆತ್ತುವ ಕಾಮಗಾರಿಯನ್ನು ಕೈಗೊಳ್ಳಲು ರೂ 300 00 ಲಕ್ಷಗಳ ರೇಖಾ ಅಂದಾಜು ಪಟ್ಟಿಯನ್ನು ಬಂದರು ಇಲಾಖೆಯವರು ತಯಾರಿಸಿರುತ್ತಾರೆ ಈ ಪ್ರಸ್ತಾವನೆಗೆ 'ಅಸೈಡ್' ಯೋಜನೆಯಲ್ಲಿ ಧನ ಸಹಾಯ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ

ನಾಗಮಂಗಲ ತಾಲ್ಲೂಕಿನಲ್ಲಿ ರೇಷ್ಮೆ ಅಭಿವೃದ್ಧಿಗೆ ಫಾರಂ ಸ್ಥಾಪನೆ

39 (130) ಶ್ರೀ ಎನ್ ಚೆಲುವನಾರಾಯಣಸ್ವಾಮಿ (ನಾಗಮಂಗಲ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರಿಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕಿನಲ್ಲಿ ರೇಷ್ಮೆತಳಿ ಅಭಿವೃದ್ಧಿಪಡಿಸಲು ಫಾರಂ ಸ್ಥಾಪನೆಗೆ ಇಲಾಖೆಯ ಕ್ರಮವೇನು

ಆ) ಈ ಫಾರಂನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಪ್ರಯತ್ನ ನಡೆಸುತ್ತಿದೆಯೇ

ಇ) ಅಂತಹ ಪ್ರಯತ್ನ ನಡೆಯುತ್ತಿದ್ದರೆ ಈ ಫಾರಂನ್ನು ಬೇರೆ ಕಡೆಗೆ ಸ್ಥಳಾಂತರಿಸದೆ ಇಲ್ಲಿಯೇ ಮುಂದುವರಿಯಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) ರಾಜ್ಯ ಸರ್ಕಾರವು ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಸ್ಥಾಪಿಸಲಾಗಿದ್ದ ರೇಷ್ಮೆ ಕೃಷಿ ಕ್ಷೇತ್ರವನ್ನು 1980 ರಲ್ಲಿ ರೇಷ್ಮೆ ತಳಿ ಅಭಿವೃದ್ಧಿ ಪಡಿಸಲು ಕೇಂದ್ರ ರೇಷ್ಮೆ ಮಂಡಳಿಗೆ ವರ್ಗಾಯಿಸಿದೆ

ಇಲ್ಲಿನ 13 00 ಎಕರೆ ಜಮೀನಿನ ಪೈಕಿ 3 13 ಎಕರೆಗಳಲ್ಲಿ ಹಿಪ್ಪನೇರಳೆ ಕೃಷಿ ಇದ್ದು ಪಿ3 ಹಂತದ ದ್ವಿತಳಿ ಮೂಲ ತಳಿಯನ್ನು ಅಭಿವೃದ್ಧಿ ಮಾಡುತ್ತಿದ್ದಾರೆ ಇದರಲ್ಲಿ ರೇಷ್ಮೆ ಇಲಾಖೆಯ ಪಾತ್ರ ಇರುವುದಿಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ದೊಡ್ಡಬಳ್ಳಾಪುರದಲ್ಲಿ ಸಿದ್ದ ಉಡುಪುಗಳ ಪಾರ್ಕ್ ನಿರ್ಮಾಣ

41 (580) ಶ್ರೀ ಕೃಷ್ಣಪ್ಪ ವಿ (ದೊಡ್ಡಬಳ್ಳಾಪುರ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಸಾಲಿನ ಆಯವ್ಯಯದಲ್ಲಿ ದೊಡ್ಡಬಳ್ಳಾಪುರದಲ್ಲಿ ಸಿದ್ದ ಉಡುಪುಗಳ ಪಾರ್ಕ್ ಸ್ಥಾಪಿಸಲಾಗುವುದೆಂದು ಹೇಳಿರುವ ಪ್ರಸ್ತಾವ ಈಗ ಯಾವ ಹಂತದಲ್ಲಿದೆ

ಆ) ಇದಕ್ಕಾಗಿ ಎಷ್ಟು ಹಣ ಕಾಯ್ದಿರಿಸಲಾಗಿದೆ? ಯಾವಾಗ ಪ್ರಾರಂಭಿಸಲಾಗುವುದು? (ವಿವರ ನೀಡುವುದು)

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ಅಪರೆಲ್ ಪಾರ್ಕ್ ಸ್ಥಾಪಿಸಲು ಉದ್ದೇಶಿಸಿದ್ದು ಇದಕ್ಕೆ ಕೆಂದ್ರ ಸರ್ಕಾರ ಅನುಮೋದನೆ ನೀಡಿರುತ್ತದೆ ಆ ಯೋಜನೆಯನ್ನು ಅನುಷ್ಟಾನಗೊಳಿಸುವ ದಿಸೆಯಲ್ಲಿ ದೊಡ್ಡಬಳ್ಳಾಪುರದಲ್ಲಿ 187 ಎಕರೆ ಜಮೀನನ್ನು ಕೆ ಐ ಡಿ ಬಿ ಮುಖಾಂತರ ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ

ಆ) ಇದಕ್ಕಾಗಿ 2002–03 ನೇ ಸಾಲಿನಲ್ಲಿ ರೂ 450 00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು 2003–04ನೇ ಸಾಲಿನಲ್ಲಿ ರೂ 520 00 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ 2004ರ ಅಂತ್ಯದ ವೇಳೆಗೆ ಪಾರ್ಕ್ ಚಟುವಟಿಕೆಗಳನ್ನು ಪ್ರಾರಂಭಿಸಲಾಗುವುದು

ಸ್ಥಳೀಯ ಕೈಗಾರಿಕೆಗಳಿಗೆ ಬಂಡವಾಳ

42 (570) ಶ್ರೀ ಗುರುಸ್ವಾಮಿ ಎ ಎಸ್ (ಚಾಮುಂಡೇಶ್ವರಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 2 ವರ್ಷಗಳಿಂದ ಎಷ್ಟು ವಿದೇಶಿ ಕಂಪೆನಿಗಳು ಬಂಡವಾಳ ಹೂಡಿದೆ, ಮೊತ್ತವೆಷ್ಟು,

ಆ) ಸ್ಥಳೀಯ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ವಿದೇಶಿ ಕಂಪೆನಿಗಳು ನೆರವನ್ನು ನೀಡಿದೆಯೇ, ಯಾವ ಪ್ರಮಾಣದಲ್ಲಿ

ಇ) ಯಾವ ಯಾವ ವಲಯಕ್ಕೆ ವಿದೇಶಿ ಕಂಪೆನಿಯವರು ಬಂಡವಾಳವನ್ನು ಒದಗಿಸಿದ್ದಾರೆ, ಮೊತ್ತವೆಷ್ಟು

ಈ) ವಿದೇಶಿ ಬಂಡವಾಳವನ್ನು ತರುವಲ್ಲಿ ಕರ್ನಾಟಕದ ಕಾನೂನುಗಳ ತೊಡಕೇನಾದರೂ ಇದೆಯೇ ಇದ್ದ ಪಕ್ಷದಲ್ಲಿ ಯಾವ ರೀತಿಯ ಕ್ರಮವನ್ನು ಜರುಗಿಸಿದ್ದೀರಿ,